ಕರ್ನಾಟಕ ಸರ್ಕಾರ

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-12.***

ಸಂಖ್ಯೆ:ಪಪೂಶಿಇ/ಶೈ.ಶಾ-04/ವಿ.ದಾ.ಕು-01/2016-17 ದಿನಾಂಕ:16-05-2016.

# ಸುತ್ತೋಲೆ

ವಿಷಯ: 2016-17ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪಾಲಿಸಬೇಕಾದ ದಾಖಲಾತಿ ಹಾಗೂ ಶೈಕ್ಷಣಿಕ ಚಟುವಟಿಕೆಗಳ ವೇಳಾಪಟ್ಟಿ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಇಡಿ 81 ಟಿಪಿಯು 2013, ದಿನಾಂಕ:24-02-2014.
2. ಸರ್ಕಾರಿ ಆದೇಶ ಸಂಖ್ಯೆ:ಇಡಿ 198 ಯೋಸಕ 2013, ದಿನಾಂಕ:15-04-2015.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದ ದಾಖಲಾತಿ ಹಾಗೂ ಶೈಕ್ಷಣಿಕ ಚಟುವಟಿಕೆಗಳ ವೇಳಾಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ಅದರಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ದಾಖಲಾತಿಯ ಪ್ರಕ್ರಿಯೆಗಳನ್ನು ಇಲಾಖೆ ನಿಗದಿಪಡಿಸಿರುವ ವೇಳಾಪಟ್ಟಿಯನ್ನು ಹಾಗೂ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ:-

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ -ಪ್ರತಿಯನ್ನು ಪದವಿ ಪೂರ್ವ ಕಾಲೇಜುಗಳಿಗೆ ಕಳುಹಿಸಲು ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ/ಉಪನ್ಯಾಸಕರಿಗೆ/ವಿದ್ಯಾರ್ಥಿಗಳಿಗೆ/ಪೋಷಕರ ಗಮನಕ್ಕೆ- ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಮೂಲಕ.

ಪ್ರತಿಗಳನ್ನು ಮಾಹಿತಿಗಾಗಿ:

3. ಮಾನ್ಯ ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ.
4. ಜಂಟಿ ನಿರ್ದೇಶಕರು,(ಆಡಳಿತ)(ಪರೀಕ್ಷೆ)(ಶೈಕ್ಷಣಿಕ)(ಮೂಲಭೂತಸೌಕರ್ಯ)(ಮಾನ್ಯತೆ ಮತ್ತು ಅನುದಾನ) ಪದವಿ ಪೂರ್ವ ಶಿಕ್ಷಣ ಇಲಾಖೆ.
5. ಉಪನಿರ್ದೇಶಕರು (ಆಡಳಿತ)(ಪರೀಕ್ಷೆ)(ಶೈಕ್ಷಣಿಕ)(ಮೂಲಭೂತಸೌಕರ್ಯ)(ಮಾನ್ಯತೆ ಮತ್ತು ಅನುದಾನ), ಪದವಿ ಪೂರ್ವ ಶಿಕ್ಷಣ ಇಲಾಖೆ.
6. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ

# 2016-17 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ

## 1.1. (ಅ) ಶೈಕ್ಷಣಿಕ ವರ್ಷದ ಪ್ರಾರಂಭ, ಮುಕ್ತಾಯ ಮತ್ತು ರಜಾ ದಿನಗಳು

| | |
|---|---|
| ಶೈಕ್ಷಣಿಕ ವರ್ಷದ ಪ್ರಾರಂಭ: | ದಿನಾಂಕ: 01-06-2016 |
| ಮಧ್ಯಂತರ ರಜೆ(ಎರಡೂ ದಿನಗಳು ಸೇರಿ): | ದಿನಾಂಕ: 07-10-2016 ರಿಂದ 27-10-2016 |
| ಶೈಕ್ಷಣಿಕ ವರ್ಷದ ಮುಕ್ತಾಯ | ದಿನಾಂಕ: 31-03-2017. |

ವಿಶೇಷ ಸೂಚನೆ:

ಪ್ರಥಮ ಮತ್ತು ದ್ವಿತೀಯ ಪಿಯುಸಿ ದಾಖಲಾತಿ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಇಲಾಖೆಯಿಂದ ಹೊರಡಿಸಿರುವ ಅರ್ಜಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕೃತ **Website www.pue.kar.nic.in** ನಿಂದ **Download** ಮಾಡಿಕೊಂಡು/ ಮುದ್ರಿಸಿಕೊಂಡು ದಾಖಲಾತಿ ಅರ್ಜಿಯಾಗಿ ಉಪಯೋಗಿಸಿ ಕೊಳ್ಳುವುದು ಅಥವಾ ಸಂಬಂಧಿಸಿದ ಕಾಲೇಜುಗಳಿಂದ ಸದರಿ ಅರ್ಜಿಯನ್ನು ಪಡೆಯಬಹುದು ಹಾಗೂ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಂದ ಎರಡು ಬಾರಿ ಅರ್ಜಿ ಶುಲ್ಕವನ್ನು ಪಡೆಯಬಾರದು.

| ಪ್ರಥಮ ಪಿಯುಸಿ ದಾಖಲಾತಿ ವೇಳಾಪಟ್ಟಿ | |
|---|---|
| ದಂಡ ಶುಲ್ಕವಿಲ್ಲದೆ ದಾಖಲಾತಿಗೆ ಕೊನೆಯ ದಿನಾಂಕ | ದಿನಾಂಕ: 17-06-2016 |
| ವಿಳಂಬ ದಾಖಲಾತಿ ರೂ 504/- ದಂಡಶುಲ್ಕದೊಂದಿಗೆ (ಎರಡೂ ದಿನಗಳು ಸೇರಿ) | ದಿನಾಂಕ: 18-06-2016 ರಿಂದ 27-06-2016 ರವರೆಗೆ |
| ವಿಶೇಷ ವಿಳಂಬ ದಾಖಲಾತಿ ರೂ 504+1680ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿ) | ದಿನಾಂಕ: 28-06-2016 ರಿಂದ 07-07-2016 ರವರೆಗೆ |
| ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ, ಯಾವುದೇ ದಂಡ ಶುಲ್ಕವಿಲ್ಲದೆ ದಾಖಲಾತಿಗೆ ಕೊನೆಯ ದಿನಾಂಕ | ಫಲಿತಾಂಶ ಪ್ರಕಟವಾದ ದಿನದಿಂದ ಕಾರ್ಯನಿರತ 7 ದಿನಗಳು |
| ಪ್ರಥಮ ಪಿಯುಸಿ ತರಗತಿಗಳ ಪ್ರಾರಂಭ | ದಿನಾಂಕ: 15-06-2016 |

## (ಅ) 2016- 2017 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ದಾಖಲಾತಿ ಶೈಕ್ಷಣಿಕ ವೇಳಾಪಟ್ಟಿ

*ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳ ದಾಖಲಾತಿ ಪ್ರಕ್ರಿಯೆಯನ್ನು ಈ ಕೆಳಕಂಡಂತೆ ಅನುಸರಿಸಲು ಸೂಚಿಸಲಾಗಿದೆ.*

| | | |
|---|---|---|
| 1 | ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಪ್ರಥಮ ಪಿಯುಸಿ ತರಗತಿಗಳ ದಾಖಲಾತಿಗೆ ಸಂಬಂಧಿಸಿದಂತೆ ಈ ಮಾಹಿತಿಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು. | ರಾಜ್ಯದ SSLC ಪರೀಕ್ಷಾ ಫಲಿತಾಂಶ ಪ್ರಕಟವಾದ ದಿನದಂದು ಈ ಕೆಳಕಂಡ ವಿವರಗಳನ್ನು ಎಲ್ಲಾ ಕಾಲೇಜಿನವರು ತಮ್ಮ ಕಾಲೇಜಿನ ಸೂಚನಾ ಫಲಕದಲ್ಲಿ ಹಾಗೂ websiteನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.<br>• ಇಲಾಖೆಯಿಂದ ಅನುಮತಿ ಪಡೆದ ಸಂಯೋಜನೆವಾರು ಹಾಗೂ ರೋಸ್ಟರ್‌ವಾರು ಪ್ರವೇಶಗಳ ಮಾಹಿತಿ<br>• ದಾಖಲಾತಿ ಶುಲ್ಕಗಳ ವಿವರ<br>• ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿಯ ಪೂರ್ಣ ವಿವರ.<br>ಪ್ರಕಟಿಸಿದ ಪ್ರತಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಇ-ಮೇಲ್ ಮುಖಾಂತರ **jd-acad-dpue@**karnataka.gov.in ಹಾಗೂ ಪ್ರತಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಅದೇ ದಿನ ಕಡ್ಡಾಯವಾಗಿ ಸಲ್ಲಿಸುವುದು. |
| 2 | ಪ್ರವೇಶ ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ | ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ 5ನೇ ಕಾರ್ಯನಿರತ ದಿನ |
| 3 | ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | ಪ್ರವೇಶ ಅರ್ಜಿಗಳನ್ನು ವಿತರಿಸಲು ನಿರ್ಧರಿಸಿದ ಕೊನೆಯ ದಿನಾಂಕದಿಂದ 3ನೆಯ ಕಾರ್ಯನಿರತ ದಿವ |
| 4 | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ ಪಟ್ಟಿ ಪ್ರಕಟಣೆ (ವರ್ಗವಾರು, ಮೆರಿಟ್ ಅನ್ವಯ ಇಳಿಕೆ ಕ್ರಮದಲ್ಲಿ). | ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಿದ ಕೊನೆಯ ದಿನಾಂಕದಿಂದ 5ನೇ ಕಾರ್ಯನಿರತ ದಿನ |
| 5 | ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿ ಪ್ರಕಟಣೆ | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಲು ನಿಗದಿ ಪಡಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ |
| 6 | ಪ್ರಥಮ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ | ಪ್ರಥಮ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ |
| 7 | ಆಯ್ಕೆಯಾದ ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಣೆ | ವಿದ್ಯಾರ್ಥಿಗಳ ಪ್ರಥಮ ಪಟ್ಟಿ ಪ್ರಕಟಪಡಿಸಿದ ದಿನಾಂಕದಿಂದ ಕಾರ್ಯನಿರತ 5ನೇ ದಿನ |
| 8 | ದ್ವಿತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ | ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ |
| 9 | ಆಯ್ಕೆಯಾದ ವಿದ್ಯಾರ್ಥಿಗಳ ತೃತೀಯ ಪಟ್ಟಿ ಪ್ರಕಟಣೆ | ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 5ನೇ ದಿನ |
| 10 | ತೃತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ | ತೃತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ |
| 11 | ಶುಲ್ಕ ಕಟ್ಟಿ ದಾಖಲಾದ ವಿದ್ಯಾರ್ಥಿಗಳ ಪಟ್ಟಿ ಪ್ರಕಟಣೆ (ವರ್ಗವಾರು/ಸಂಯೋಜನೆವಾರು) ಸಂಯೋಜನೆವಾರು ಕೊನೆಯ ಪ್ರವೇಶ ಪಡೆದ ವಿದ್ಯಾರ್ಥಿಯ Cut off ಪ್ರಕಟಣೆ | ತೃತೀಯ ಪಟ್ಟಿ ಪ್ರಕಟವಾದ 4ನೇ ದಿನ |
| 12 | ಪ್ರವೇಶಗಳು ಉಳಿದ್ದಿದಲ್ಲಿ – ಉಳಿದ ಪ್ರವೇಶಗಳಿಗೆ ಅಂತಿಮ ಪಟ್ಟಿ ಪ್ರಕಟಣೆ ಪಟ್ಟಿ | ತೃತೀಯ ಪಟ್ಟಿ ಪ್ರಕಟವಾದ 6ನೇ ದಿನ |
| 13 | ಪ್ರಥಮ ಪಿಯುಸಿ ತರಗತಿಗಳ ಪ್ರಾರಂಭ ದಿನಾಂಕ | **15-06-2016.** |

ಮೇಲ್ಕಂಡಂತೆ ದಾಖಲಾತಿ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಾಚಾರ್ಯರು ಕಡ್ಡಾಯವಾಗಿ ಪಾಲಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಇದನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಖಾಸಗಿ ಕಾಲೇಜುಗಳ ಶೈಕ್ಷಣಿಕ ಮಾನ್ಯತೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

## 1.2. ಪ್ರಥಮ ಪಿಯುಸಿ ದಾಖಲಾತಿಗೆ ಅನುಸರಿಸಬೇಕಾದ ಮಾರ್ಗಸೂಚಿಗಳು

1. ಪ್ರವೇಶ/ಸೀಟುಗಳನ್ನು ರೋಸ್ಟರ್ ಪದ್ಧತಿಯಂತೆ ಹಂಚುವ ವಿಧಾನ.

ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳ ಆಧಾರದ ಮೇಲೆ, ಮೆರಿಟ್‌ನಲ್ಲಿ ಯಾವುದೇ ಗುಂಪಿನ ಮೀಸಲಾತಿ ವಿದ್ಯಾರ್ಥಿಗಳು, ಸಾಮಾನ್ಯ ವರ್ಗಕ್ಕೆ ನಿಗದಿಯಾಗಿರುವ ಕಟ್ ಆಫ್ ಮಾರ್ಕ್ಸ್ (**cut off marks**) ಒಳಗೆ ಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಸಾಮಾನ್ಯ ವರ್ಗ ಎಂದು ಪರಿಗಣಿಸಿ, ಅವರನ್ನು ಸಾಮಾನ್ಯ ವರ್ಗದ ಪಟ್ಟಿಗೆ ಸೇರಿಸಬೇಕು, ನಂತರ ಆಯಾ ಮೀಸಲಾತಿ ಗುಂಪಿನವರಿಗೆ ನಿಯಮಾನುಸಾರ ಮೀಸಲಾತಿ ನಿಯಮಗಳನ್ನು ಅನುಸರಿಸಬೇಕು. ವಿವಿಧ ವರ್ಗಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿಗಳು ಅರ್ಜಿಯನ್ನು ಹಾಕದಿದ್ದಲ್ಲಿ, ಅಂತಹ ಪ್ರವೇಶಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸಿ ರೋಸ್ಟರ್ ಪದ್ಧತಿಯಂತೆ ಹಂಚಬಹುದು. ಯಾವುದೇ ಕಾರಣಕ್ಕೂ ಅಯಾ ವರ್ಗದಡಿಯಲ್ಲಿ ಬಂದಿರುವ ಅರ್ಜಿಗಳನ್ನು ಮಿಸಲಾತಿಗೆ ಅನುಗುಣವಾಗಿ ಆಯಾ ವರ್ಗ/ ಕೆಟಗರಿಗೆ ಪರಿಗಣಿಸದೆ, ಸಾಮಾನ್ಯ ವರ್ಗಕ್ಕೆ ವರ್ಗಾಯಿಸಬಾರದು. ಇಂತಹ ವರ್ಗಾವಣೆಗಳನ್ನು ಷರಾದಲ್ಲಿ ನಮೂದಿಸಬೇಕು.

**ಅ.ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ದಾಖಲಾತಿ ವಿಧಾನ.**

1. ಲಭ್ಯವಿರುವ ಎಲ್ಲ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ **ರೋಸ್ಟರ್** ಪದ್ಧತಿಯಂತೆ ಹಂಚಿಕೆ ಮಾಡಬೇಕು.
2. ಸಹ ಶಿಕ್ಷಣ (ಕೋ–ಎಜುಕೇಷನ್) ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲ ಪ್ರವೇಶಗಳಲ್ಲಿ ಶೇಕಡಾ 50% ರಷ್ಟು ಪ್ರವೇಶಗಳನ್ನು 1995ರ ನಿಯಮ 14(6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ **ರೋಸ್ಟರ್** ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

**ಆ. ಸಾಮಾನ್ಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ವಿಧಾನ.**

1. 1995ರ ನಿಯಮಗಳ 14ರ ಉಪನಿಯಮ (12(ಬಿ)) ರನ್ವಯ ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡಾ **20% ಪ್ರವೇಶಗಳನ್ನು** ಈ ಕಾಲೇಜುಗಳ ಆಡಳಿತ ಮಂಡಳಿಯವರು ಅವರ ವಿವೇಚನೆಯಂತೆ ಹಂಚಲು ಅಧಿಕಾರವಿರುತ್ತದೆ.
2. ಸಂಯೋಜನೆವಾರು ಉಳಿದ ಶೇಕಡಾ 80% ಪ್ರವೇಶಗಳನ್ನು ***ಮೆರಿಟ್*** ಆಧಾರದ ಮೇಲೆ ***ರೋಸ್ಟರ್*** ಪದ್ಧತಿಯಂತೆ ಸಂಯೋಜನೆವಾರು ಹಂಚಿಕೆ ಮಾಡಬೇಕು.
3. ಸಹ ಶಿಕ್ಷಣ (ಕೋ–ಎಜುಕೇಷನ್)ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲ ಸರ್ಕಾರದ ಪ್ರವೇಶಗಳಲ್ಲಿ ಶೇಕಡಾ 50% ರಷ್ಟು ಪ್ರವೇಶಗಳನ್ನು 1995ರ ನಿಯಮ 14(6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.
4. ಈ ಕಾಲೇಜುಗಳಲ್ಲಿ ಒಂದು ವಿಭಾಗದ ಎಲ್ಲಾ ವಿಷಯಗಳಲ್ಲಿ ಒಂದು ಅಥವಾ ಎರಡು ವಿಷಯಗಳು ಅನುದಾನರಹಿತವಾಗಿದ್ದಲ್ಲಿ, ಅಂತಹ ವರ್ಗಕ್ಕೆ ಕಂಡಿಕೆ ಆ(1) ಮತ್ತು (2) ರಂತೆ ಪ್ರವೇಶಗಳನ್ನು ಹಂಚಿಕೆ ಮಾಡಬೇಕು.
5. ಈ ಕಾಲೇಜುಗಳಲ್ಲಿ ಒಂದು ವರ್ಗದಲ್ಲಿ ಎಲ್ಲ ವಿಷಯಗಳು ಅನುದಾನರಹಿತವಾಗಿದ್ದಲ್ಲಿ, ಅಂತಹ ವರ್ಗಕ್ಕೆ ಕಂಡಿಕೆ ಉ(1) ಮತ್ತು(2) ರಂತೆ ಪ್ರವೇಶಗಳನ್ನು ಹಂಚಿಕೆ ಮಾಡಬೇಕು.

**ಇ. ಅಲ್ಪಸಂಖ್ಯಾತ (ಭಾಷೆ ಮತ್ತು ಧಾರ್ಮಿಕ) ಸಂಸ್ಥೆಗಳ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ವಿಧಾನ.**

1. ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡಾ 25% ಪ್ರವೇಶಗಳನ್ನು ಈ ಕಾಲೇಜುಗಳ ಆಡಳಿತ ಮಂಡಳಿಯವರು ತಮ್ಮ ಭಾಷೆ/ಧರ್ಮಕ್ಕೆ ಸೇರಿದ(Caste) ವಿದ್ಯಾರ್ಥಿಗಳಿಗೆ ಹಂಚಲು ಅಧಿಕಾರವಿರುತ್ತದೆ.

2. ಉಳಿದ ಶೇಕಡಾ 75% ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಸಂಯೋಜನೆವಾರು ಹಂಚಿಕೆ ಮಾಡಬೇಕು.

3. ಸಹ ಶಿಕ್ಷಣ (ಕೋ-ಎಜುಕೇಷನ್)ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಪ್ರವೇಶಗಳಲ್ಲಿ ಶೇಕಡಾ 75% ರಷ್ಟು ಪ್ರವೇಶಗಳಲ್ಲಿ 1995ರ ನಿಯಮ 14(6) ರ ಪ್ರಕಾರ ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಬೇಕು.

**ಈ. ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಸಂಸ್ಥೆಗಳ ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿನ ವಿಧಾನ.**

1. ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡಾ 50% ಪ್ರವೇಶಗಳನ್ನು ಈ ಕಾಲೇಜುಗಳ ಆಡಳಿತ ಮಂಡಳಿಯವರು ತಮ್ಮ ಜಾತಿಯ (Caste) ವಿದ್ಯಾರ್ಥಿಗಳಿಗೆ ಹಂಚಲು ಅಧಿಕಾರವಿರುತ್ತದೆ.
2. ಉಳಿದ ಶೇಕಡಾ 50% ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಸಂಯೋಜನಾವಾರು ಹಂಚಿಕೆ ಮಾಡಬೇಕು.
3. ಸಹ ಶಿಕ್ಷಣ (ಕೋ-ಎಜುಕೇಷನ್)ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲ ಸರ್ಕಾರಿ ಕೋಟಾದ ಶೇಕಡಾ 50% ರಷ್ಟು ಪ್ರವೇಶಗಳಲ್ಲಿ 1995ರ ನಿಯಮ 14(1)ರ ಪ್ರಕಾರ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

**ಉ. ಎಲ್ಲಾ ವರ್ಗಗಳ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿನ ವಿಧಾನ.**

1. ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡಾ 50% ಪ್ರವೇಶಗಳನ್ನು ಈ ಕಾಲೇಜುಗಳ ಆಡಳಿತ ಮಂಡಳಿಯವರು ತಮ್ಮ ವಿವೇಚನೆಯಂತೆ ಹಂಚಲು ಅಧಿಕಾರವಿರುತ್ತದೆ.
2. ಸಂಯೋಜನೆವಾರು ಉಳಿದ ಶೇಕಡಾ 50% ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.
3. ಸಹ ಶಿಕ್ಷಣ (ಕೋ-ಎಜುಕೇಷನ್)ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲ ಸರ್ಕಾರದ ಪ್ರವೇಶಗಳಲ್ಲಿ ಶೇಕಡಾ 50% ರಷ್ಟು ಪ್ರವೇಶಗಳನ್ನು 1995ರ ನಿಯಮ 14(1)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗು ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

**ವಿಶೇಷ ಸೂಚನೆ:**

- ➢ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ **CET/AIEEE/IIT/JEE/CA/CPT, Integrated Course, Bridge Course** ಇತ್ಯಾದಿ ಹೆಸರಿನಲ್ಲಿ ನಿಗದಿತ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ಪಡೆದು, ಕಾನೂನು ಬಾಹಿರವಾಗಿ ಇತರೆ ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಅಥವಾ ಸಂಪನ್ಮೂಲ ವ್ಯಕ್ತಿಗಳ/Electronic ಮಾಧ್ಯಮದ ಸಹಾಯದಿಂದ ಬೋಧನೆ ಮಾಡುವುದು ಕಂಡು ಬಂದಲ್ಲಿ ಅಂತಹ ಕಾಲೇಜುಗಳ ಮಾನ್ಯತೆಯನ್ನು ರದ್ದು ಪಡಿಸಲಾಗುವುದು. ಜೊತೆಗೆ ಸದರಿ ಸಂಸ್ಥೆಗಳ ಪ್ರಾಚಾರ್ಯರ ಮತ್ತು ಆಡಳಿತ ಮಂಡಳಿಯವರುಗಳ ಮೇಲೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರನ್ವಯ ಕಾನೂನು ಕ್ರಮ ಜರುಗಿಸಲಾಗುವುದು.
- ➢ ಇಲಾಖೆಯಿಂದ ಮಾನ್ಯತೆ ಪಡೆದ ಪದವಿ ಪೂರ್ವ ಕಾಲೇಜುಗಳು ಯಾವುದೇ ಬೇರೆ ಸಂಸ್ಥೆ, ಬೇರೆ ಆಡಳಿತ ಮಂಡಳಿ, ಕೋಚಿಂಗ್ ನೀಡುವ ಸಂಸ್ಥೆ, ಇತ್ಯಾದಿಗಳೊಂದಿಗೆ ಪರಸ್ಪರ ವಿನಿಮಯದೊಂದಿಗೆ, ಆ ಸಂಸ್ಥೆಯ ಹೆಸರನ್ನು ತಮ್ಮ ಕಾಲೇಜಿನ ಹೆಸರಿನೊಂದಿಗೆ ಬಳಕೆ ಮಾಡಿ ಯಾವುದೇ ರೀತಿ ಶೈಕ್ಷಣಿಕ ಚಟುವಟಿಕೆಗಳನ್ನು ಮಾಡತಕ್ಕದ್ದಲ್ಲ.
- ➢ ಇಲಾಖೆಯಿಂದ ಮಾನ್ಯತೆ ಪಡೆದು ಇಲಾಖೆ ನೀಡಿರುವ ಕಾಲೇಜಿನ ಸಂಕೇತ ಸಂಖ್ಯೆಯನ್ನು ಬಳಸಿ ಕಾಲೇಜಿನ ಹೆಸರಿನಲ್ಲಿ ಪದವಿ ಪೂರ್ವ ಪಠ್ಯಕ್ರಮದ ಚಟುವಟಿಕೆಗಳನ್ನು ಹಾಗೂ ಇಲಾಖೆಯ ಸೂಚನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಂಸ್ಥೆಯ ಹೆಸರನ್ನು ಬಳಸಿ ಪದವಿ ಪೂರ್ವ ಕಾಲೇಜನ್ನು ನಡೆಸತಕ್ಕದಲ್ಲ ಹಾಗೂ ಕಾಲೇಜು ಸಂಕೇತ ಸಂಖ್ಯೆಯನ್ನು ದುರ್ಬಳಕ್ಕೆ ಮಾಡಿದ್ದಲ್ಲಿ ಅಂತಹ ಕಾಲೇಜಿನ ಆಡಳಿತ

| | |
|---|---|
| | ಮಂಡಳಿ/ಸಂಸ್ಥೆಯ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.<br>➢ ಯಾವುದೇ ಸಂಸ್ಥೆಯು ಇಲಾಖೆಯು ನಿಗದಿ ಪಡಿಸಿದ ಪಠ್ಯಕ್ರಮ/ಪಠ್ಯಪುಸ್ತಕವನ್ನು ಹೊರತು ಪಡಿಸಿ ಬೇರೆ ಯಾವುದೇ ಪಠ್ಯಕ್ರಮ/ಪಠ್ಯಪುಸ್ತಕವನ್ನು ಬೋಧಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಗೈಡ್ ಪುಸ್ತಕಗಳನ್ನು ಖರೀದಿಸಲು ಒತ್ತಾಯ ಮಾಡುವುದು ಸಹ ಕಾನೂನು ಬಾಹಿರ. ಅಂಥಹ ಸಂಘ/ಸಂಸ್ಥೆಗಳ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿಯವರುಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.<br>➢ ಪದವಿ ಪೂರ್ವ ಶಿಕ್ಷಣ ಇಲಾಖೆಯು ಮುದ್ರಿಸಿರುವ ಪಠ್ಯಪುಸ್ತಕಗಳನ್ನು ಹೊರತು ಪಡಿಸಿ, ಯಾವುದೇ ಇತರ ಪುಸ್ತಕಗಳನ್ನು ಬೋಧಿಸಲು ಅವಕಾಶವಿಲ್ಲ ಹಾಗೂ ಬೇರೆ ಪಠ್ಯವಸ್ತವನ್ನು ಖರೀದಿಸಲು ವಿದ್ಯಾರ್ಥಿಗಳಿಗೆ/ ಅವರ ಪೋಷಕರಿಗೆ ಒತ್ತಡ ಹೇರುವುದು ಕಾನೂನು ಬದ್ಧವಲ್ಲ.<br>➢ ಪದವಿ ಪೂರ್ವ ಶಿಕ್ಷಣ ಇಲಾಖೆಯು ಸೂಚಿಸಿರುವ ಶೈಕ್ಷಣಿಕ ವೇಳಾಪಟ್ಟಿಯಂತೆ ಕಾಲೇಜುಗಳಲ್ಲಿ ಕಿರು ಪರೀಕ್ಷೆ ಹಾಗೂ ಪರೀಕ್ಷೆಗಳನ್ನು ನಡೆಸುವುದು.<br>➢ ಸರ್ಕಾರ/ಪದವಿ ಪೂರ್ವ ಶಿಕ್ಷಣ ಇಲಾಖೆ/ಶಿಕ್ಷಣ ಕಾಯ್ದೆಯಲ್ಲಿ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸಿರುವುದಿಲ್ಲ. ಆದರೆ ಕೆಲವು ಕಾಲೇಜಿನ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿಯವರು ಸಮವಸ್ತ್ರವನ್ನು ಕಡ್ಡಾಯಗೊಳಿಸಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆಯುತ್ತಿರುವುದಾಗಿ ಇಲಾಖೆ/ಸರ್ಕಾರಕ್ಕೆ ದೂರು ಬಂದಿರುತ್ತದೆ. ನಿಯಮಬಾಹಿರವಾಗಿ ವಿದ್ಯಾರ್ಥಿಗಳಿಂದ ಸಮವಸ್ತ್ರಕ್ಕಾಗಿ ಶುಲ್ಕಗಳನ್ನು ಪಡೆದಲ್ಲಿ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿಯವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು. |
| ಕ್ರಮ ಸಂಖ್ಯೆ | **1.3 ಕಾಲೇಜಿನವರು ಅನುಸರಿಸಬೇಕಾದ ಮಾರ್ಗಸೂಚಿಗಳು** |
| 1 | ಕರ್ನಾಟಕ ರಾಜ್ಯದ ಎಸ್‌ಎಸ್‌ಎಲ್‌ಸಿಗೆ ತತ್ಸಮಾನ (COBSE ರವರಿಂದ ಮಾನ್ಯತೆ ಪಡೆದ) ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಹೊರರಾಜ್ಯದ/CBSE/ICSE ವಿದ್ಯಾರ್ಥಿಗಳಿಂದ ಪ್ರಥಮ ಪದವಿ ಪೂರ್ವ ತರಗತಿಗೆ ದಾಖಲಾಗುವ ಸಮಯದಲ್ಲಿ ಸದರಿ ವಿದ್ಯಾರ್ಥಿಗಳಿಂದ ಅರ್ಹತಾ ಪತ್ರ (Eligibility Certificate)ದ ಶುಲ್ಕವಾಗಿ ರೂ.600-00/-(ಆರು ನೂರು ಮಾತ್ರ)ಗಳನ್ನು ವಸೂಲು ಮಾಡುವುದು. ಹಾಗೂ ಹೊರದೇಶದ ವಿದ್ಯಾರ್ಥಿಗಳಿಂದ ಅರ್ಹತಾ ಪತ್ರ (Eligibility Certificate)ದ ಶುಲ್ಕವಾಗಿ ರೂ.3600-00/-(ಮೂರು ಸಾವಿರದ ಆರು ನೂರು ಮಾತ್ರ)ಗಳನ್ನು ವಸೂಲು ಮಾಡುವುದು. ವಿದ್ಯಾರ್ಥಿಗಳಿಂದ ವಸೂಲಿ ಮಾಡಿರುವ ಶುಲ್ಕವನ್ನು ಕಾಲೇಜಿನವರು ಸಂಬಂಧಿಸಿದ ಖಜಾನೆಯ Agency Bankಗೆ ಲೆಕ್ಕ ಶೀರ್ಷಿಕೆ:(0202-01-102-01-06)ರಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ಚಲನ್ ಮೂಲಕ ಪಾವತಿಸಿ ಅದನ್ನು Proforma-A ರೊಂದಿಗೆ ಲಗತ್ತಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು(ಶೈಕ್ಷಣಿಕ ಶಾಖೆ), ಪದವಿ ಪೂರ್ವ ಶಿಕ್ಷಣ ಇಲಾಖೆ, ರವರಿಗೆ ಸಲ್ಲಿಸುವುದು. |
| 2 | ವಿದೇಶಗಳಲ್ಲಿ ಕರ್ನಾಟಕ ರಾಜ್ಯದ ಎಸ್‌ಎಸ್‌ಎಲ್‌ಸಿಗೆ ತತ್ಸಮಾನವಾದ (COBSE ರವರಿಂದ ಮಾನ್ಯತೆ ಪಡೆದ ಸಂಸ್ಥೆ/ ಮಂಡಳಿಗಳಲ್ಲಿ) ಪರೀಕ್ಷೆಗಳನ್ನು ಪಾಸು ಮಾಡಿದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿಯಿಂದ ನೀಡಲ್ಪಟ್ಟ ಅರ್ಹತಾ ಪತ್ರವನ್ನು (Eligibility Certificate)ಅಭ್ಯರ್ಥಿಗಳಿಂದ ಪಡೆದು ದಾಖಲಾತಿ ನೀಡಬೇಕು. ಇಲಾಖೆಯಿಂದ ಅರ್ಹತಾ ಪತ್ರವನ್ನು ಪಡೆಯದಿರುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ದಾಖಲಾತಿ ನೀಡಬಾರದು. ದಾಖಲಾತಿ ನೀಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ದಾಖಲಾತಿಯನ್ನು ರದ್ದುಪಡಿಸಲಾಗುವುದು ಮತ್ತು ಮುಂದೆ ಆಗುವ ಪರಿಣಾಮಗಳಿಗೆ |

| | |
|---|---|
| | **ಪ್ರಾಚಾರ್ಯರೇ ಪೂರ್ಣ ಜವಾಬ್ದಾರರಾಗುತ್ತಾರೆ. ಈ ರೀತಿಯ ದಾಖಲಾತಿಗಳನ್ನು ಮುನ್ಸೂಚನೆ ಇಲ್ಲದೇ ರದ್ದು ಪಡಿಸಲಾಗುವುದು.** |
| 3 | ಇಲಾಖೆಯಿಂದ ಅನುಮತಿ ಪಡೆದ ಭಾಷಾ ಮತ್ತು ಸಂಯೋಜನೆಗಳಿಗೆ ಮಾತ್ರ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬೇಕು. ಇದನ್ನು ಮೀರಿ ನಿಯಮಬದ್ಧವಲ್ಲದ ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಅಭ್ಯಾಸ ಮಾಡಲು ಅನುವು ಮಾಡಿಕೊಟ್ಟಲ್ಲಿ ಅಂತಹ ದಾಖಲಾತಿಗಳನ್ನು ಏಕಪಕ್ಷೀಯವಾಗಿ ರದ್ದು ಪಡಿಸಲಾಗುವುದು. |
| 4 | SSLC/ತತ್ಸಮಾನ ಪರೀಕ್ಷೆಗಳಲ್ಲಿ ಭಾಷಾ ವಿನಾಯಿತಿ ಪಡೆದಿರುವ ಕಲಿಕಾ ನ್ಯೂನತೆ, ಬುದ್ಧಿಮಾಂದ್ಯ ಹಾಗೂ ಶ್ರವಣದೋಷ ಇರುವ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಭಾಷಾ ವಿನಾಯಿತಿಯನ್ನು ಪಡೆಯಲು ನಿಗಧಿತ ದಿನಾಂಕದೊಳಗೆ ನಿಯಮಾನುಸಾರ ಅರ್ಜಿಯನ್ನು ಸರ್ಕಾರದ ಆದೇಶದಂತೆ ಸಲ್ಲಿಸಬೇಕು. ಪರೀಕ್ಷೆಗಳು ಪ್ರಾರಂಭವಾಗುವ ಪೂರ್ವದಲ್ಲಿ ಈ ಸೌಲಭ್ಯವನ್ನು ಒದಗಿಸುವಂತೆ ಕೋರಿ ಬೇಡಿಕೆ ಸಲ್ಲಿಸಲು ಅವಕಾಶವಿರುವುದಿಲ್ಲ. ತಡವಾಗಿ ಬರುವ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು. |
| 5 | 2016-17 ನೇ ಸಾಲಿಗೆ ಪ್ರತಿ ವರ್ಗಕ್ಕೆ ನಿಗದಿತ ಗರಿಷ್ಠ ಪ್ರವೇಶಗಳ ಸಂಖ್ಯೆ 80(ಎಂಬತ್ತು) ಮಾತ್ರ, ಇದನ್ನು ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಲ್ಲಿ ಅಂತಹ ವಿದ್ಯಾರ್ಥಿಗಳ ದಾಖಲಾತಿಯನ್ನು ಅನುಮೋದಿಸಲಾಗುವುದಿಲ್ಲ ಮುಂದಿನ ಆಗುಹೋಗುಗಳಿಗೆ ಪ್ರಾಚಾರ್ಯರು/ಆಡಳಿತ ಮಂಡಳಿ ರವರೆ ಜವಾಬ್ದಾರರಾಗುತ್ತಾರೆ. |
| 6 | ಪ್ರಥಮ ಪಿಯುಸಿಗೆ ದಾಖಲಾಗುವ ವಿದ್ಯಾರ್ಥಿಗಳಿಂದ ಪಡೆಯಬೇಕಾದ ದಾಖಲೆಗಳು:<br>• ಇಲಾಖೆ ನಿಗದಿ ಪಡಿಸಿ ಭರ್ತಿ ಮಾಡಿದ ಅರ್ಜಿ.<br>• ಶಾಲೆಗಳ ಮುಖ್ಯಸ್ಥರು ದೃಢೀಕರಿಸಿದ ಎಸ್‌ಎಸ್‌ಎಲ್‌ಸಿ/ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ.<br>• ಮೂಲ ವರ್ಗಾವಣೆ ಪತ್ರ.<br>• ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 6 ಭಾವಚಿತ್ರ.<br>• ಶುಲ್ಕ ವಿನಾಯಿತಿ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರಗಳು.<br>• ವಿಕಲಚೇತನಕ್ಕೆ ಸಂಬಂಧಪಟ್ಟಂತೆ ಸೌಲಭ್ಯ ಪಡೆಯಲು ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರವನ್ನು ದೃಢೀಕರಿಸಿದ ದಾಖಲೆಗಳನ್ನು ದಾಖಲಾತಿ ಸಮಯದಲ್ಲಿ ನೀಡುವುದು.<br>**ಈ ಮೇಲ್ಕಂಡ ಎಲ್ಲಾ ದಾಖಲೆಗಳು ಕಡ್ಡಾಯವಾಗಿ ಪಡೆಯಬೇಕು.** |
| 7 | **ಪ್ರಾಚಾರ್ಯರು/ಆಡಳಿತ ಮಂಡಳಿ ರವರು ಇಲಾಖೆ/ ಸರ್ಕಾರ ನಿಗಧಿ ಪಡಿಸಿರುವ ಶುಲ್ಕಗಳ ಪಟ್ಟಿಯನ್ನು ಕಾಲೇಜಿನ ಸೂಚನ ಫಲಕದಲ್ಲಿ (Notice Board) ಕಡ್ಡಾಯವಾಗಿ ಪ್ರಕಟಿಸಬೇಕು.** |
| 8 | ಅ. ಪ್ರತಿ ವಿದ್ಯಾರ್ಥಿಯ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯ ನೋಂದಣಿ ಸಂಖ್ಯೆ, ವರ್ಷ, ಮತ್ತು ತಿಂಗಳ ಮಾಹಿತಿಯನ್ನು ಕರಾರುವಕ್ಕಾಗಿ ಅನುಬಂಧ-01 ಮತ್ತು ಆನ್‌ಲೈನ್‌ನಲ್ಲಿ ನಮೂದಿಸುವುದು. ನೋಂದಣಿ ಸಂಖ್ಯೆಯನ್ನಾಗಲಿ ಅಥವಾ ವರ್ಷ ಮತ್ತು ತಿಂಗಳ ಮಾಹಿತಿಯನ್ನಾಗಲೀ ತಪ್ಪಾಗಿ ಇಲ್ಲವೇ ಅಪೂರ್ಣವಾಗಿ ನಮೂದಿಸಬಾರದು. |

| | |
|---|---|
| | ಆ. ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ನೀಡಿರುವ ಎಸ್‌ಎಸ್‌ಎಲ್‌ಸಿ ವಿವರಗಳನ್ನು ಗಣಕೀಕರಿಸಿ ತಾಳೆ ಮಾಡಲಾಗುವುದು. ಯಾವುದೇ ವಿದ್ಯಾರ್ಥಿಯ ವಿವರವು ಒಂದಕ್ಕಿಂತ ಹೆಚ್ಚಿನ ಕಾಲೇಜುಗಳಲ್ಲಿ ಇರುವುದು ಕಂಡು ಬಂದಲ್ಲಿ, ಅಂತಹ ವಿದ್ಯಾರ್ಥಿಗಳು ದ್ವಿಪ್ರತಿ ವರ್ಗಾವಣೆ ಪತ್ರದ **(Duplicate TC)** ದಾಖಲೆಗಳ ಆಧಾರದ ಮೇಲೆ ದಾಖಲಾತಿ ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇಂತಹ ವಿದ್ಯಾರ್ಥಿಗಳ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ದಾಖಲಾತಿ ಮಾಡಿಕೊಂಡಿರುವ ಕಾಲೇಜಿನ ಪ್ರಾಚಾರ್ಯರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು.<br>ಇ. ದ್ವಿಪ್ರತಿ ವರ್ಗಾವಣೆ ಪತ್ರದ**(Duplicate TC)** ಮೇಲೆ ದಾಖಲಾತಿ ಪಡೆದಿರುವ ವಿದ್ಯಾರ್ಥಿಯ ದಾಖಲಾತಿಯನ್ನು ರದ್ದು ಪಡಿಸಿ ಹಾಗೂ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. |
| **9.** | **ಪ್ರಥಮ ಪಿ.ಯು.ಸಿಗೆ ದಾಖಲಾದ ವಿದ್ಯಾರ್ಥಿಗಳು ಸಂಯೋಜನೆ ಬದಲಾವಣೆ ಕುರಿತು.**<br>ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಯು ದಾಖಲಾತಿ ಪಡೆದ ದಿನಾಂಕದಿಂದ 1 ತಿಂಗಳ ಒಳಗಾಗಿ, ವಿಷಯ /ವಿಷಯಗಳ ಬದಲಾವಣೆಗೆ ಅವಕಾಶವಿದ್ದು. ಬದಲಾವಣೆ ಬಯಸುವ ವಿಷಯಗಳಲ್ಲಿ ಕನಿಷ್ಠ ಶೇ 75% ಹಾಜರಾತಿ ದೊರಕುವುದು ಎಂಬುದನ್ನು ಖಚಿತ ಪಡಿಸಿಕೊಂಡು ವಿಷಯ ಬದಲಾವಣೆಯನ್ನು ಪ್ರಾಚಾರ್ಯರ ಹಂತದಲ್ಲಿಯೇ ಮಾಡಿಕೊಳ್ಳತಕ್ಕದ್ದು. ಈ ವಿಚಾರವಾಗಿ ಯಾವುದೇ ವಿದ್ಯಾರ್ಥಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಬಾರದು. |
| ಕ್ರಮ ಸಂಖ್ಯೆ | **1.4 ಪ್ರಥಮ ಪಿಯುಸಿಗೆ ದಾಖಲಾತಿ ಪಡೆಯಲು ಅರ್ಹತೆಗಳು** |
| **1** | ಕರ್ನಾಟಕ ರಾಜ್ಯದ ಎಸ್‌ಎಸ್‌ಎಲ್‌ಸಿ ಅಥವಾ ಎಸ್‌ಎಸ್‌ಎಲ್‌ಸಿಗೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರಥಮ ಪಿಯುಸಿಗೆ ದಾಖಲಾಗಲು ಅರ್ಹರಾಗಿರುತ್ತಾರೆ. |
| **2** | **CBSE/ICSE/10 ನೇ ತರಗತಿಗೆ ತತ್ಸಮಾನವಾದ ಯಾವುದೇ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾಗಲು ಅರ್ಹರಾಗಿರುತ್ತಾರೆ.** COBSE **ರವರಿಂದ ಮಾನ್ಯತೆ ಪಡೆದ ಪರೀಕ್ಷಾ ಮಂಡಳಿಗಳ ವಿವರಗಳನ್ನು ಸಹ ಇಲಾಖೆಯ ಅಂತರ್ಜಾಲದಲ್ಲಿ ಇದರೊಂದಿಗೆ ಪ್ರಕಟಿಸಲಾಗಿದೆ.** |
| **3** | IGCSE ಪಠ್ಯ ಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ದಾಖಲಾತಿಯನ್ನು ನಿರ್ದೇಶನಾಲಯದಿಂದ ಅರ್ಹತಾ ಪತ್ರ ಪಡೆದ ನಂತರವೇ ದಾಖಲಾತಿ ಮಾಡಿಕೊಳ್ಳಬೇಕು. ಫಲಿತಾಂಶ ಪ್ರಕಟವಾದ ನಂತರ IGCSE Board ರವರು ನೀಡುವ ಅಧಿಕೃತ ಅಂಕಪಟ್ಟಿಯನ್ನು ಪಡೆದ ನಂತರವೇ ದಾಖಲಾತಿ ಮಾಡಿಕೊಳ್ಳಬೇಕು. ಇಲಾಖೆಯು ಆಯಾ ಕಾಲಕ್ಕೆ ಹೊರಡಿಸಿರುವ ಸೂಚನೆಯ ಅನುಸಾರ ದಾಖಲಾತಿ ಮಾಡಿ ಕೊಳ್ಳುವುದು. ಇದನ್ನು ಬಿಟ್ಟು ಕಾಲೇಜಿನ ಪ್ರಾಚಾರ್ಯರು ಯಾವುದೇ ಕಾರಣಕ್ಕೂ ಪರೀಕ್ಷಾ ಫಲಿತಾಂಶ ಪ್ರಕಟವಾಗುವುದಕ್ಕಿಂತ ಮೊದಲು ಶಾಲೆಯವರು ನೀಡುವ Mock exam/Provisional Marks Card ಆಧಾರದ ಮೇಲೆ ದಾಖಲಾತಿ ಮಾಡಿಕೊಳ್ಳಬಾರದು. ಈ ರೀತಿ ದಾಖಲಾತಿ ಮಾಡಿಕೊಂಡಲ್ಲಿ ಪ್ರಾಚಾರ್ಯರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ. ಈ ರೀತಿಯ ದಾಖಲಾತಿಗಳನ್ನು ಏಕಪಕ್ಷಿಯವಾಗಿ ರದ್ದುಪಡಿಸಲಾಗುವುದು. |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

## ಅನುಬಂಧ-1

**ಈ ಕೆಳಕಂಡ ಸೆಕೆಂಡರಿ ಎಜುಕೇಷನ್ ಬೋರ್ಡ್‌ಗಳಿಂದ 10ನೇ ತರಗತಿಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಮಾತ್ರ ಪ್ರಥಮ ಮತ್ತು ದ್ವಿತೀಯ ಪಿಯುಸಿ ದಾಖಲಾತಿಗೆ ಅರ್ಹರಿರುತ್ತಾರೆ:**

Following are the education boards of the council as members of COBSE, Delhi

1. ANDHRA PRADESH BOARD OF INTERMEDIATE EDUCATION
2. ANDHRA PRADESH BOARD OF SECONDARY EDUCATION
3. AP OPEN SCHOOL SOCIETY
4. ASSAM HIGHER SECONDARY EDUCATION COUNCIL
5. BOARD OF SECONDARY EDUCATION, ASSAM
6. ASSAM SANSKRIT BOARD
7. BIHAR SCHOOL EXAMINATION BOARD
8. BIHAR BOARD OF OPEN SCHOOLING & EXAMINATION
9. BIHAR STATE MADRASA EDUCATION BOARD
10. BIHAR SANSKRIT SHIKSHA BOARD
11. BANASTHALI VIDYAPITH
12. CENTRAL BOARD OF SECONDARY EDUCATION
13. CHHATISGARH BOARD OF SECONDARY EDUCATION
14. CHHATISGARH STATE OPEN SCHOOL
15. CHHATISGARH SANSKRIT BOARD, RAIPUR
16. CHHATISGARH MADRASA BOARD
17. COUNCIL FOR THE INDIAN SCHOOL CERTIFICATE EXAMINATIONS
18. DAYALBAGH EDUCATIONAL INSTITUTE (DEEMED UNIVERSITY)
19. GOA BOARD OF SECONDARY AND HIGHER SECONDARY EDUCATION
20. GUJARAT SECONDARY AND HIGHER SECONDARY EDUCATION BOARD
21. BOARD OF SCHOOL EDUCATION HARYANA
22. HIMACHAL PRADESH BOARD OF SCHOOL EDUCATION
23. J & K STATE BOARD OF SCHOOL EDUCATION
24. JHARKHAND ACADEMIC COUNCIL,RANCHI
25. KARNATAKA SECONDARY EDUCATION EXAMINATION BOARD
26. GOVT. OF KARNATAKA DEPARTMENT OF PRE-UNIVERSITY EDUCATION
27. KERALA BOARD OF PUBLIC EXAMINATION
28. KERALA BOARD OF HIGHER SECONDARY EDUCATION
29. MAHARASHTRA STATE BOARD OF SECONDARY AND HIGHER SECONDARY EDUCATION
30. BOARD OF SECONDARY EDUCATION MADHYA PRADESH
31. MADHYA PRADESH STATE OPEN SCHOOL
32. MAHARISHI PATANJALI SANSKRIT SANSTHAN
33. BOARD OF SECONDARY EDUCATION, MANIPUR
34. COUNCIL OF HIGHER SECONDARY EDUCATION, MANIPUR
35. MEGHALAYA BOARD OF SCHOOL EDUCATION
36. MIZORAM BOARD OF SCHOOL EDUCATION
37. NAGALAND BOARD OF SCHOOL EDUCATION

38. NATIONAL INSTITUTE OF OPEN SCHOOLING
39. COUNCIL OF HIGHER SECONDARY EDUCATION, ODISHA
40. BOARD OF SECONDARY EDUCATION, ODISHA
41. PUNJAB SCHOOL EDUCATION BOARD
42. BOARD OF SECONDARY EDUCATION RAJASTHAN
43. RAJASTHAN STATE OPEN SCHOOL, JAIPUR
44. RASHTRIYA SANSKRIT SANSTHAN
45. STATE BOARD OF SCHOOL EXAMINATIONS(SEC.) & BOARD OF HIGHER SECONDARY EXAMINATIONS TAMIL NADU
46. TRIPURA BOARD OF SECONDARY EDUCATION
47. TELANGANA STATE BOARD OF SECONDARY EDUCATION, CHAPPEL ROAD HYDREBAD
48. TELANGALA STATE BOARD OF HIGH SCHOOL & INTERMEDIATE EDUCATION NAPALLI HYDREBAD.
49. U.P. BOARD OF HIGH SCHOOL & INTERMEDIATE EDUCATION
50. U.P. BOARD OF SEC. SANSKRIT SANSTHAN COUNCIL
51. BOARD OF SCHOOL EDUCATION UTTARAKHAND
52. WEST BENGAL BOARD OF SECONDARY EDUCATION
53. WEST BENGAL COUNCIL OF HIGHER SECONDARY EDUCATION
54. WEST BENGAL BOARD OF PRIMARY EDUCATION
55. WEST BENGAL BOARD OF MADRASAH EDUCATION
56. WEST BENGAL COUNCIL OF RABINDRA OPEN SCHOOLING
57. HIGHER SEC. EDU. BOARD, SANOTHIMI BHAKTAPUR NEPAL
58. MAURITIUS EXAMINATIONS SYNDICATE.
59. BHUTAN COUNCIL FOR SCHOOL EXAMINATIONS AND ASSESMENT
60. THE AGAKHAN UNIVERISTY EXAMINATION BOARD DAUDPOTA ROAD, KARACHI.
61. INTRER BOARD COMMITTEE OF CHAIRMAN (IBCC) ISLAMABAD, (PAKISTAN)
62. CAMBRIDGE INTERNATIONAL EXAMINATIONS CAMBRIDGE U.K.
63. EDEXCEL LONDON
64. INTERNATIONAL BACCALAUREATE SINGAPORE.